Regd No B.G. 155

48 th Year
ನೇ ವರ್ಷ

Sri 'Satyavadi
— DAILY —
MYSORE

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಪ್ಯೇದಾಂ ಎಂ ಪಿ ಸುಬ್ಬರಾಯುರು 2 ಪೈ]

12—2—1965

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩ ರೂಪಾಯಿ

Protect the Cow.
ಗೋಸಂರಕ್ಷಣೆ ಮಾಡಿ

8 ಲಕ್ಷ ರೂಗಳ ಚೆನ್ನ ಬೆಳ್ಳಿ ವಶ

ಲಕ್ನೌ— ರೂ 3 ಲಕ್ಷ ಬೆಲೆಯ 25 ಮಣ ಬೆಳ್ಳಿ ಗಟ್ಟಿ ಮತ್ತು ರೂ 5 ಲಕ್ಷ ಬೆಲೆಯ ಭಂಗಾರದ ಆಭರಣ ಮತ್ತು 'ಕೃತಕ ಹುಂಡಿ' ಗಳನ್ನು ಒಬ್ಬ ಚಿನ್ನದ ಗಟ್ಟಿಗಳ ವ್ಯಾಪಾರಿಯ ವಾಣಿಜ್ಯಾಸಿ ಮತ್ತು ಜೌನ್ಪುರ ನಿವಾಸಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

★

ವಿಶ್ವಸಂಸ್ಥೆ ಪರಿಸ್ಥಿತಿ

ವಿಶ್ವಸಂಸ್ಥೆ— ವಿಶ್ವಸಂಸ್ಥೆ ಅವಸಾನದಲ್ಲಿದೆ ಎಂದು ಭಾರತ ಎಚ್ಚರಿಸಿದೆ! ನಿನ್ನೆ ಸಾಧಾರಣ ಕಾರ್ಯಕ್ರಮದಲ್ಲಿ ಜನರಲ್ ಅಸೆಂಬ್ಲಿಯನ್ನು ನಡೆಸಲಾಗದಿದ್ದುದೇ ಈ ಶಂಕೆಗೆ ಕಾರಣ.

★

ಇಂಗ್ಲೀಷಿನ ಮೇಲೆ ಪ್ರತಿಬಂಧಕ ಕೂಡದು

ಪಶ್ಚಿಮ ಬಂಗಾಳ ಶಾಸನ ಸಭೆಯು ಇಂಗೀಷಿನ ಮೇಲೆ ಯಾವ ಪ್ರತಿಬಂಧಕವೂ ಕೂಡದೆಂದು ನಿರ್ಣಯಿಸಿದೆ.

★

ಪೋಲೀಸರಿಗೆ ಏಟು

ಹೈದರಾಬಾದು— ಹಿಂದೀ ವಿರೋಧಿಗಳು ವಾಂಸವಳ್ಳಿಯಲ್ಲಿ [ಪೋಲೀಸು ಪಾರ್ಟಿ ಮೇಲೆ ಬಿದ್ದು ಅಧಿಕಾರಿಗಳನ್ನು ಗಾಯಗೊಳಿಸಿದರು.

★

ನಾಳೆಯಿಂದ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ಡಾ|| ಜಯರಾಮಾಚಾರ್ಯ, ಜ್ಯೋತಿರ್ವಿದ್ವಸ್ಮಣಿ
ಮುಪತ್ಯಹ್ನ ಜ್ಯೋಯಿಸರಿಂದ
'13 ಶನಿವಾರ ದ್ವಾದಶಿ ಪುನರ್ವಸು

ತಿಂಗಳ ಕಡೆಯವರೆಗೆ ರಜಾ

ಮದರಾಸು— ಈ ತಿಂಗಳ ಸಡೆಯವರೆಗೆ ಎಲ್ಲಾ ಕಾಲೇಜು ಮತ್ತು ಶಾಲೆಗಳನ್ನು ಮುಚ್ಚಲು ಸರಕಾರದ ಆಜ್ಞೆ ಹೊಗಿದೆ

★

ಜಾಗರೂಕ ಸೂಚನೆ

ನವದೆಹಲಿ— ರಾಷ್ಟ್ರಪರಕಾರ್ಯಕ್ಕೆ ಅಥವಾ ಇತರ ಅಧಿಕಾರಿಗಳಿಗೆ ಹಿಂದಿ ಅಧಿಕೃತ ಭಾಷೆಯಾಗಿ ಉಪಯೋಗಿಸಬೇಕೆಂಬ ಸೂಚನೆಯನ್ನು ತಮ್ಮ ಒಪ್ಪಿಗೆ ಇಲ್ಲದೆ ಕೊಡಬಾರದೆಂದು ವಿದ್ಯಾ ಸಚಿವಶಿಕ್ಷಾಗಾರರು ತಮ್ಮ ಸಚಿವಾಲಯದ ಅಧಿಕಾರಿಗಳು ಮತ್ತು ನೌಕರರಿಗೆ ತಿಳಿಸಿದಾರೆ

★

ಸ್ವತಂತ್ರ ಪಕ್ಷದ ಪ್ರತಿಭಟನೆ

ಕಡಪ— ಗುಬ್ಬಿ ತಾಲ್ಲೂಕಿನ ಸ್ವತಂತ್ರ ಪಕ್ಷ ಸಮ್ಮೇಳನದಲ್ಲಿ ಕಡಪ್ಪಾ ಹಿಂದಿ ವಿರುದ್ಧ ಪ್ರತಿಭಟಿಸಲಾಯಿತು

ಅಶ್ರುವಾಯು ಪ್ರಯೋಗ

ಬೆಂಗಳೂರು— ನಿನ್ನೆ ಕಂಟೋನ್ಮೆಂಟಿನಲ್ಲಿ ಮತ್ತು ಶಿವರಾಮಪುರದಲ್ಲಿ ಬಿಟಿಎಸ್ ಬಸ್ಸುಗಳಿಗೆ ಗುಂಪುಗಳಿಂದ ಕಲ್ಲು ಹೊಡೆತ ಜೋರಾಗಿದ್ದು ಅಶ್ರುವಾಯು ಪ್ರಯೋಗ ನಡೆಸಲಾಯಿತು ; 39 ಮಂದಿ ದಸ್ತಗಿರಿ ಮಾಡಲ್ಪಟ್ಟರು.

★

ಗುಂಡಿನೇಟಿಗೆ 6 ಜನ ಆಹುತಿ

ಮದರಾಸು— ರಾಜ್ಯಪಟ್ 5 ಕಡೆ ಹಿಂದೀ ವಿರುದ್ಧ ಪ್ರದರ್ಶನ ಉದ್ರೇಕಗೊಂಡು ಪೋಲೀಸರು ಗುಂಡುಹಾರಿಸಿದ ಪರಿಣಾಮವಾಗಿ 6 ಮಂದಿ ಸತ್ತರು.

ಕೇಂದ್ರದ ಇಬ್ಬರು ಮಂತ್ರಿಗಳ ರಾಜೀನಾಮೆ

ಮದರಾಸು— ಕಾಂಗ್ರೆಸ್ಸು ಅಧ್ಯಕ್ಷ ಶ್ರೀ ಕಾಮರಾಜರು ಹಿಂದೀ ವಿರುದ್ಧ ಜಳವಳ್ಳಿ ತೀವ್ರವಾಗಿರುವುದನ್ನು ಕಂಡು ತಮ್ಮ ಕೇಂದ್ರದ ಜನಾನಾವಣಾ ಪ್ರವಾಸವನ್ನು ವಜಾಮಾಡಿ ಮದರಾಸಿಗೆ ಬರಲಿರುವರು

★

ಮದರಾಸು— ಕೆಡಂಬಳಂ ರೈಲ್ವೇ ಸ್ಟೇಷನ್ನಿನ ಮೇಲೆ ಧಾಳಿ ಮಾಡಲು ಬಂದ ಗುಂಪಿನ ಮೇಲೆ ನಿನ್ನೆ ಪೋಲೀಸರು ಗುಂಡುಹಾರಿಸಿದರು : 17 ವರ್ಷದ ಹುಡುಗನೊಬ್ಬನು ಅಸುನೀಗಿದನು

★

ತಿರುವೆಂಡ್ರಂ— ಅಖಿಲ ಭಾರತ ಪರೀಕ್ಷೆಗಳಲ್ಲಿ ಸ್ಥಳೀಯ ಭಾಷೆಗಳು ಮಾಧ್ಯಮವಾಗಿರಬೇಕೆಂದು ಡೆಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿ ಹೇಳಿದರು.

★

ಕೆಲ್ಲಂಬಳ್ಳಿಯಲ್ಲಿ ಎರಡು ಗುಂಪುಗಳ ಹೊಡೆದಾಟವಾಗಿ ಒಬ್ಬ ಮರಣ ಹೊಂದಿ ನಾಲ್ಕು ಮಂದಿ ಗಾಯಗೊಂಡರೆಂದು ಚಾಮರಾಜನಗರದ ವಾರ್ತೆ

ಎಲಿಡೈಕುಂಚಿ— ದೇವಸ್ಥಾನದ ರಥಕ್ಕಾದ ಒಂದು ಅಪಸ್ಕಾರದಿಂದ ರಥೋತ್ಸವ ನಿಂತಿತು : ರಥಬೀದಿಯ ಮೂಲೆಗೆ ಒಂದಾಗ ರಥದ ದೂರಿಯು ಮುರಿದು ಮೇಲಿನ ಅಲಂಕಾರ, ಪೂಜಾರಿ; ವಾದ್ಯದವರೆಲ್ಲ ಕೆಳಗೆ ಬಿದ್ದರು : ದೇವರು ಮಾತ್ರ ಹಾಗೇ ಇದ್ದರು : ರಥವು 5 ಶತಮಾನಗಳ ಹಳೆಯದು ; ಅದಂ ರಿಪೇರಿಗೆ ಸಹಸ್ರಾರು ರೂಪಾಯಿ ಬೇಕಾಗಿದೆ.

ನವದೆಹಲಿ 11— ಭಾಷಾ ನಿಷಯದಲ್ಲಿ ಉಟ್ಟಾದ ಭಿನ್ನಾಭಿಪ್ರಾಯಕ್ಕಾಗಿ ಕೇಂದ್ರದ ಅಕಾರ ರುಂತಿ ಶ್ರೀ ಸುಬ್ರಹ್ಮಣ್ಯಂ ಮತ್ತು ವೆಟ್ರೋಲು ಮತ್ತು ರಸಾಯನಿಕ ಮಂತ್ರಿ ಶ್ರೀ ಅಲಗೇಷ್ ರಾಜೀನಾಮೆ ಕೊಟ್ಟರು — ಪ್ರಕಾಸಕಿ ಕೊಟ್ಟ ರಾಜೀನಾಮೆಗೆ ಪ್ರಧಾನಿಗಳು ವಿಷಾದ ಸೂಚಿಸಿರುವರು.

★

ನವದೆಹಲಿ— ರಾಜೀನಾಮೆಯಿತ್ತ ಕೇಂದ್ರ ಅಡಾಂ ಮಂತಿ ಶ್ರೀ ಸುಬ್ರಹ್ಮಣ್ಯಂರವರು ಮದರಾಸಿನ ವಿದ್ಯಾರ್ಥಿ ಪ್ರತಿನಿಧಿಗಳನ್ನು ಚಳವಳಿ ವಾಪಸಾಯಿಸಿಕೊಳ್ಳಿಸಿರೆಂದೂ, ತಾವೂ ಇತರರೊಡನೆ ನೇರವಾಗಿ ಹಿಂದೀ ಭಾಷಾಜ್ಞಾನವಿಲ್ಲದವರಿಗೆ ತೃಪ್ತಿಕರವಾದ ರೀತಿ ಕಂಡುಹಿಡಿಯಲು ವ್ಯಯಿಸಿಲು ಪ್ರಯತ್ನಿಸುವುದಾಗಿಯೂ ತಿಳಿಸಿರುವರು.

★

ನವದೆಹಲಿ— ನೆಹರು ಅಧಿಕೃತ ಭಾಷೆ ಬಗ್ಗೆ ಕೊಟ್ಟ ಭರವಸೆಯಂತೆ ಸರಕಾರ ಪೂರ್ತಿ ಮತ್ತು ಮಹತ್ವಪೂರ್ಣವಾಗಿ ಅನುಸರಿಸಲಾಗುವುದೆಂದು ನಿನ್ನೆ ಘೋಷಿಸಿದರು.

★

ಚೀನೀ ಸೇನೆ

ಗಾಂಗಟಾಕ್— ಚುರಿಚೇ ಕಣಿವೆಯಲ್ಲಿ ಚೀನೀಯರು ತಮ್ಮ ಸೇನೆ ಹೆಚ್ಚಿಸುತ್ತಿರುವರೆದು ಭಾರತ ರಕ್ಷಣಾ ಖಾತೆ ಮಂತ್ರಿ ಡಾ|| ರಾಜು ಹೇಳಿದರು.

ಮುಸಿರಲ್ ಪ್ರೆಸ್ ನೋಟು

ಮೈಸೂರಿನ ಪ್ರಾಣಿಭಿಕ್ಷಾ ಕಮಿಟಿಯವರು ತಾ|| 6 ರಂದ ಹೆಲ್ತ್ ಫುಡ್ ಜೊತೆಲಿ ವಂಡಿ ಲಮ್ಸಂಗಳ 10 ಹೋಟೆಲುಗಳಿಗೆ ಭೇಟಿ ಕೊಟ್ಟು ಅವು ಅನ ರೋಗ್ಯ ರೀತಿ ಇದ್ದುದನ್ನು ಕೆಂಡು 5 ಹೋಟೆಲುಗಳ ಮೂಲೀಕ್ಷಣೆನ್ನ ಪಾಸಿಕೂಟು ಮಾಡಲೂ, ಎರಡು ಹೋಟೆಲಿನವರು ಎಚ್ಚರಿಕೆ ಗಮನಿಸದಿದ್ದರೆ ಲೈಸೆನ್ಸು ಕ್ಯಾನ್ಸಲು ಮಾಡಲೂ ಎರಡು ಹೋಟೆಲುಗಳಿಗೆ ಎಚ್ಚರಿಕೆ ಕೊಡಲೂ ಆಜ್ಞೆ ದಾಖಲಾದವು.

*

ಸೋವಿಯೆತ್ ನಾಡಿನಲ್ಲಿ ದೊರೆತ ಅವರಿಶವಾದ ಟಾಗೋರರ ಪತ್ರ

ಡಲ್ಕಾಬಿನಸ್ಕ— ರವೀಂದ್ರನಾಥ ಠಾಕೂರರ ಅಪರಿಚಿತ ಪತ್ರವೊಂದನ್ನು ಸ್ಥಳೀಯ ಸಾಹಿತ್ಯ ವಸ್ತುಕೆಯು ಪ್ರಕಟಿಸಿದೆ : ಹುಂಡಾಲೆ ಲೇಖಕ ಪ್ರದೀಪಿಂಗ ಯು ರೆಜಾನಸ್ಕಿಯವರು ಟಾಗೋರರಿಗೆ ತಮ್ಮ "ರೈ ಧಾನ್ಯದ ಬೆಳೆ" ಎಂಬ ಕೃತಿಯನ್ನು 40 ವರ್ಷಗಳ ಹಿಂದೆ ಕಳಿಸಿದ್ದರು : ಈ ಬಳುವಳಿಯನ್ನು ಮೆಚ್ಚಿ ಟಾಗೋರರು ಬರೆದ ಪತ್ರ ಇದು : ಸೋವಿಯೆತ್ ರಾಜ್ಯಾಧಿಕಾರದ ವ್ಯಾಪಂಥ ದಸೆಯಲ್ಲಿಯೂ ಸಹ ಭಾರತ-ಸೋವಿಯೆತ್ ಸಂಬಂಧಗಳು ಅಸ್ತಿತ್ವದಲ್ಲಿದ್ದವೆಂಬುದಕ್ಕೆ ಈ ಪತ್ರವು ಇನ್ನೊಂದು ನಿದರ್ಶನವಾಗಿದೆ.

ತುಳು ಗಾದೆಗಳು

ದಿನಹೂಗದೆ ಬೆಣ್ಣೆ ಕಂಗದು.
ಕರ್ಮಫಲವನ್ನು ಅನುಭವಿಸಿಯೇ ತೀರಬೇಕು
ಎಡಗಾಲು ಎಡವಿದರೆ ಬಲಗೈಗೆ ಅದಾಮು
ನಾಯಿ ಕಚ್ಚಿತೆಂದು ನಾಯಿಯ ಕಾಲನ್ನು ಕಚ್ಚುವುದೇ ?
ಎಕ್ಕಡ ಕಾಲನ್ನು ಕಚ್ಚಿತೆಂದು ಅದನ್ನು ಕಚ್ಚಲಾದೀತೆ ?
ನಾಯಿಯು ಕಂಡು ಬೊಗಳುತ್ತದೆ, ಅದರೆ ನಂವನುಷ್ಯ ಕಾಣದೇ ಬೊಗಳುತ್ತಾನೆ
ಚಿನ್ನದ ಚೂರಿ ಎಂದು ಹೊಟ್ಟೆಗೆ ತಿವಿದುಕೊಳ್ಳಬಹುದೇ ?
ವಿನಯದ ವಾಕ್ಯಗಳನ್ನು ಕಂಡರೆ ವಂಚಸ್ಸಿಗೆ ಮುದ್ದಾಟವಾಗುತ್ತದೆ.
ಮಕ್ಕಳ ತಪ್ಪಿಗೆ ಶಿಕ್ಷೆಯನ್ನು ಕೊಡುವದು ಹಾಗೂ ಅವರ ಆಹಾರ ವಿಹಾರ ವಿದ್ಯಾಬ್ಯಾಸಗಳಲ್ಲಿ ಲಕ್ಷ್ಯವಿಟ್ಟು ಪೋಷಣೆ ಮಾಡುವುದು ಹೆತ್ತವರ ಕರ್ತವ್ಯ.

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಹುಂಡಾ ಬಾಯಿದೆ ಮುಗಿದಿರುವವರು ದಯವಾಡಿ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವೆಂಕಟಾಚಾರ್, ಬಯಸಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತಸುಬ್ಬಯ್ಯಂಗಾರ್, ಶಾಸ್ತ್ರಿಧರ್ಮ ಪ್ರಚಾರಿಣಿಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮುಂತಿಪುರಂ, ಮೈಸೂರು 4



Help The 'Gorakshana'

ಪುಡ್‌ಲಾಂಡ್ ಅಮೋಘ 2 ನೇ ವಾರ
ಶಿ ಸು ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನ
— ಅಮೋಘ ಆಸ್ಪ್ರೇಮ್ ಕಲರ್ ಹಿಂದಿ ಚಿತ್ರ —
ಹರ್ಕ್ಯೂಲೆಸ್ HERCULES
ಶಿ
ನಟವರ್ಗ— ದಾರಾಸಿಂಗ್, ಏಕ್ ಹೆಲ್ಕ, ಮಮ್ತಾಜ್, ವ್ಯಾಸ್, ಮಾರುತಿ
ಸಾಹಸವೀರ ರೋಮಾಂಚಕ ಅದ್ಭುತ ಚಿತ್ರ : ಸೃಷ್ಟಿ ಸಂಗೀತ ವಿನೋದವಿದೆ
[ದಿನವಹಿ 3 ಪ್ರದರ್ಶನಗಳು]

ಆಪೆರಾ— 12-2-65 ರಿಂದ
ವನಮೋಹಕ ತಮಿಳು ಚಿತ್ರ [ದಿನ 3 ಆಟಗಳು]
ಅಮ್ಮಾ ಎಂಗೆ ?
ನಟವರ್ಗ— ರುಷ್ಯರಾಮುಡು, ಜಯಚಿತ್ರ, ಚಂದ್ರಕಾಂತ, ವಸಂತ್
ಬೇಬಿ ಶಕೀಲ

ರಣಜಿತ್‌ನಲ್ಲಿ ಜನಭರಿತ 2 ನೇ ವಾರ
.... ಪ್ರತಿಸಪ್ತಾಹವೂ ನೋಡಿ ಆನಂದಿಸಿರಿ ಅತ್ಯಮೋಘ ಕನ್ನಡ ಚಿತ್ರ ....
— ಕರ್ನಾಟಕ ಫಿಲಂಸ್ ಅರ್ಪಿಸುವ ವಿವಿಧ ಭಾರತಿಯವರ —
ಭರತ ಜೀವ [ಕನ್ನಡ]
ತಾರಾಗಣ— ಕಲ್ಯಾಣ ಕುಮಾರ್, ಅಶ್ವತ್ಥ್, ಕಾಮಚಂದ್ರಶಾಸ್ತ್ರಿ
ನರಸಿಂಹರಾಜು, ಶಿವರಾಜ್, ಸರೋಜಾದೇವಿ, ಲಕ್ಷ್ಮೀದೇವಿ, ಜಯಶ್ರೀ
ನಿರ್ಮಾಪಕರು— ಟಿ. ಆರ್. ಸೀತಾರಾಮು ಶಾಸ್ತ್ರಿ
4 ವಾರಗಳು ಕಾಂಪ್ಲಿಮೆಂಟರಿ ಪಾಸು, ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿರುತ್ತೆ.
ಪ್ರತಿ ದಿನ 3 ಪ್ರದರ್ಶನಗಳು — ಕರ್ನಾಟಕ ಫಿಲಂಸ್ ಹಂಚಿಕೆ

ಅಶೋಕಾ ಏಜೆನ್ಸೀಸ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಸಮಸ್ತ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಜಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Lakshminarasimha Press
Quality Printing — Neat Binding
Sivarampet, Mysore

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4